# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

## ಸಿ.ಸಿ ನಂ:**330/2021**

ಪಿ.ಡಬ್ಲ್ಯೂ-**4**
ಸಿ.ಡಬ್ಲ್ಯೂ-**7**

| | | |
|---|---|---|
| ಹೆಸರು | : | ಹರಿ ಮಹಾದೇವ ಮೀರಾಶಿ |
| ವಯಸ್ಸು | : | **45** ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಲೋಂಡಾ |

ದಿನಾಂಕ 04-09-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸಸಅ ರವರಿಂದ</u>

ಚಾ.ಸಾ.6 ನನ್ನ ಸಂಬಂಧಿಕ. 2018 ನೇ ಸಾಲಿನಲ್ಲಿ ಚಾ.ಸಾ.6 ರವರು ನಾನು ಮನೆಯಲ್ಲಿದ್ದಾಗ ನನಗೆ ಫೋನ್ ಮಾಡಿ ನನ್ನ ಅಣ್ಣನ ಮಗ ವಿಜಯ ತುಕಾರಾಮ ಮಿರಾಶಿ ಹಾಗೂ ಆತನ ಸ್ನೇಹಿತ ಸೋಮನಾಥ ರವರಿಗೆ ಗಾರ್ಲಿ ಕ್ರಾಸ್ ಬಳಿ ಅಪಘಾತವಾಗಿರುವ ವಿಚಾರ ತಿಳಿಸಿರುತ್ತಾರೆ. ಆನಂತರ ನಾವು ಅಪಘಾತವಾದ ಸ್ಥಳಕ್ಕೆ ಹೋಗಿದ್ದು ಅಲ್ಲಿ ಚಾ.ಸಾ.6 ರವರನ್ನು ಅಪಘಾತ ಹೇಗೆ ಆಗಿರುತ್ತದೆ ಎಂದು ವಿಚಾರಿಸಿದಾಗ ಚಾ.ಸಾ.6 ರವರು ನಮ್ಮ ಅಣ್ಣನ ಮಗನ ಮೋಟಾರ್ ಸೈಕಲ್ ಗೆ ಎದುರುಗಡೆಯಿಂದ ಗೂಡ್ಸ ವಾಹನ ಬಂದು ಡಿಕ್ಕಿಪಡಿಸಿ ಅಪಘಾತಪಡಿಸಿರುವ ವಿಚಾರ ತಿಳಿಸಿರುತ್ತಾರೆ. ನಂತರ ಅಪಘಾತದಲ್ಲಿ ಗಾಯಗೊಂಡವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದು ಸೋಮನಾಥ ರವರು ಮಾರ್ಗದ ಮಧ್ಯೆ ಮೃತಪಟ್ಟಿರುತ್ತಾನೆ. ಅಪಘಾತ ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

***(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)***

<u>ಪಾಟೀ ಸವಾಲುಃ ಸಸಅ ರವರಿಂದ</u>

ಚಾ.ಸಾ.6 ರವರನ್ನು ವಿಚಾರಿಸಿದಾಗ ಚಾ.ಸಾ.6 ರವರು ಆರೋಪಿಯ ತಪ್ಪಿ ನಿಂದ ಅಪಘಾತವಾಗಿರುವ ವಿಚಾರ ನನಗೆ ತಿಳಿಸಿರುತ್ತಾರೆಂದರೆ ಸರಿ. ಅಪಘಾತವಾದ ದಿನಾಂಕ 10.12.2020 ಆಗಿರುತ್ತದೆಯೆಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಸ್.ಎಸ್.ಎಂ ವಕೀಲರಿಂದ</u>

ಅಪಘಾತವಾದ ವಿಷಯವನ್ನು ತಿಳಿದು ನಾನು, ಚಾ.ಸಾ.6 ರವರ ಜೊತೆಗೆ ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆಂದರೆ ಸರಿಯಲ್ಲ. ಅಪಘಾತ ಯಾರ ತಪ್ಪಿ ನಿಂದ ಆಗಿರುತ್ತದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲವೆಂದರೆ ಸರಿ. ಚಾ.ಸಾ.6 ರವರು ಆರೋಪಿಯ ತಪ್ಪಿ ನಿಂದ ಅಪಘಾತವಾಗಿರುವ ವಿಚಾರವನ್ನು ನನಗೆ ತಿಳಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮೃತ ಮಿರಾಶಿ ನನ್ನ ಅಣ್ಣನ ಮಗನಾದುದರಿಂದ ಅವರ ಕುಟುಂಬಕ್ಕೆ ಅಪಘಾತ ಪರಿಹಾರ ಪಡೆಯಲು ಸಹಾಯವಾಗುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ನನ್ನ ಯಾವುದೇ ಹೇಳಿಕೆ ಪಡೆದಿರುವುದಿಲ್ಲವೆಂದರೆ ಸರಿ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.